

بِسۡمِ اللّٰہِ الرَّحۡمٰنِ الرَّحِیۡم

# ಜಮಾಅತಿನ ಹುದ್ದೇದಾರರು ಹಾಗೂ ಮುರಬ್ಬಿ ಪರಸ್ಪರ ಸಹಕಾರ ನೀಡಿ ಕಾರ್ಯ ನಿರ್ವಹಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **10-03-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಈಗ ಲೋಕದ ಅನೇಕ ದೇಶಗಳಲ್ಲಿ ಜಾಮಿಅ ಅಹ್ಮದಿಯಾ ಸ್ಥಾಪಿತವಾಗಿದೆ. ಅಲ್ಲಿಂದ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ಮುರಬ್ಬಿಗಳು ತಮ್ಮ ಕಾರ್ಯಕ್ಷೇತ್ರಗಳಿಗೆ ಆಗಮಿಸಿದ್ದಾರೆ. ಆಗಮಿಸುತ್ತಾ ಇದ್ದಾರೆ. ಕೆಲವು ದಿನಗಳ ಹಿಂದೆ ಯು.ಕೆ.ಯ ಜಾಮಿಅ ಅಹ್ಮದಿಯಾದಲ್ಲಿ ಯು.ಕೆ. ಮತ್ತು ಕೆನಡದ ಜಾಮಿಅಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಯುಕ್ತ ಕಾನ್ವೋಕೇಶನ್ ಜರಗಿತು. ಶಾಹಿದ್ ಬಿರುದು ಪಡೆದ ಇವರು ತಮ್ಮನ್ನು ಜಮಾಅತಿನ ಸೇವೆಗೆ ಅರ್ಪಿಸುವವರಾಗಿದ್ದಾರೆ. ಅವರಲ್ಲಿ ಬಹುತೇಕ ಜನರು, ಅಂದಾಜು ಎಲ್ಲರೂ ವಕ್ಫೇ ನೌ ಪದ್ಧತಿಗೆ ಸೇರಿದವರಾಗಿದ್ದಾರೆ. ಲೌಕಿಕತೆ ಮತ್ತು ಲೌಕಿಕ ಆಕರ್ಷಣೆಗಳು ಉತ್ತುಂಗದಲ್ಲಿರುವ ಪಶ್ಚಿಮದ ದೇಶಗಳಲ್ಲಿ ವಾಸಿಸುವ ಈ ವಿದ್ಯಾರ್ಥಿಗಳು ತಮ್ಮ ಜೀವಿತವನ್ನು ಅರ್ಪಿಸಿ ಅಲ್ಲಾಹನ ಧರ್ಮದ ಸೈನಿಕರೊಂದಿಗೆ ಸೇರಲು ಮುಂದೆ ಬಂದಿರುವುದು ನಿಶ್ಚಯವಾಗಿಯೂ ಅವರ ಸಾತ್ವಿಕತೆಯ ಮತ್ತು ಧರ್ಮ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆವು ಎಂಬ ಅವರ ಪ್ರತಿಜ್ಞೆ ಈಡೇರಿಸುವುದರ ಪ್ರಕಟಣೆಯಾಗಿದೆ. ಆದರೆ ನೆನಪಿಡಬೇಕಾದುದೇನೆಂದರೆ ಅಲ್ಲಾಹನ ಅನುಗ್ರಹ ದೊರಕದಿದ್ದರೆ ಅವರಿಗೆ ಹಾಗೆ ಮಾಡಲು ಸಾಧ್ಯವಾಗದು. ಆದುದರಿಂದ ಸೇವೆ ಮಾಡುವ ಭಾಗ್ಯ ಲಭಿಸಿರುವುದು ಅಲ್ಲಾಹನ ಅನುಗ್ರಹವೆಂದು ಮನವರಿಕೆ ಮಾಡಿಕೊಳ್ಳಬೇಕು. ಅಲ್ಲಾಹನ ಮುಂದೆ ಬಾಗಿಕೊಂಡು ಅಲ್ಲಾಹನ ಅನುಗ್ರಹವನ್ನು ಯಾವಾಗಲೂ ಅನ್ವೇಷಿಸುತ್ತಾ ಇರಬೇಕು. ಕಾನ್ವೋಕೇಶನ್ (ಬಿರುದು ದಾನ ಸಮಾರಂಭ)ದಲ್ಲಿ ನಾನು ಹೇಳಿದ್ದೆ: ಜಮಾಅತ್‌ಗೆ ಮುರಬ್ಬಿಗಳ ಮತ್ತು ಮುಬಲ್ಲಿಗರ ಬಹಳ ಆವಶ್ಯತೆ ಇದೆ. ಈ ಆವಶ್ಯಕತೆ ವರ್ಧಿಸುತ್ತದೆ. ಅದು ಈಗ ಬಹಳಷ್ಟು ವರ್ಧಿಸಿದೆ. ಆದುದರಿಂದ ವಾಕಿಫೀನೆ ನೌ ಪದ್ಧತಿಗೆ ಸೇರಿದವರಲ್ಲಿ ಹೆಚ್ಚು ಜನರು ಜಾಮಿಅ ಅಹ್ಮದಿಯಾದಲ್ಲಿ ವಿದ್ಯಾಭ್ಯಾಸ ಮಾಡಲು ಮುಂದೆ ಬರಬೇಕಾದುದು ಆವಶ್ಯಕವಾಗಿದೆ. ತಂದೆ ತಾಯಂದಿರು ತಮ್ಮ ಮಕ್ಕಳಿಗೆ ಈ ವಿಷಯದ ಬಗ್ಗೆ ಗಮನ ಹರಿಯುವಂತೆ ಮಾಡಬೇಕು. ಅವರಿಗೆ ಹೇಗೆ ತರಬೇತಿ ನೀಡಬೇಕೆಂದರೆ ಜಾಮಿಅ ಅಹ್ಮದಿಯಾದಲ್ಲಿ ಪ್ರವೇಶಿಸಬೇಕೆಂಬ ಅಭಿರುಚಿ ಅವರಲ್ಲಿ ಹುಟ್ಟುವಂತೆ ಮಾಡಬೇಕು.

ವಾಕಿಫೀನೆ ನೌ ಬಾಲಕರು ಜಾಮಿಅ ಅಹ್ಮದಿಯಾದಲ್ಲಿ ಪ್ರವೇಶಿಸುವ ಬಗ್ಗೆ ಪ್ರಯತ್ನಿಸಬೇಕು. ನಾನು ಹೇಳಿದ ಹಾಗೆ, ತಂದೆ ತಾಯಂದಿರು ಅವರನ್ನು ಅದಕ್ಕೆ ಸಿದ್ಧರಾಗುವಂತೆ ಮಾಡಬೇಕು. ಕಾರ್ಯಕ್ಷೇತ್ರಕ್ಕೆ ಪ್ರವೇಶಿಸುವ ಮುರಬ್ಬಿಗಳ ಮನಸ್ಸಿನಲ್ಲಿ ಕೆಲವು ಪ್ರಶ್ನೆಗಳು ಉದಿಸುತ್ತವೆ. ಅವುಗಳ ಬಗ್ಗೆ ಅವರು ಪ್ರಸ್ತಾಪಿಸುತ್ತಾ ಇರುತ್ತಾರೆ. ಅಥವಾ ಅವುಗಳ ಬಗ್ಗೆ ವಿಚಾರಿಸುತ್ತಾರೆ. ನಾನು ಅವುಗಳ ಬಗ್ಗೆ ಸಹ ವಿವರಿಸುವೆನು.

ಮುರಬ್ಬಿಗಳು ಕೇಳುವ ಪ್ರಶ್ನೆಗಳಲ್ಲಿ ಒಂದು, ನಮ್ಮ ಕೆಲಸದಲ್ಲಿ ಸ್ಥಳೀಯ ಸದರ್(ಅಧ್ಯಕ್ಷ) ಎಷ್ಟರ ಮಟ್ಟಿಗೆ ಹಸ್ತಕ್ಷೇಪ ಮಾಡಬಹುದು? ಎಂಬುದಾಗಿದೆ. ನಮ್ಮ ಪರಿಮಿತಿಗಳು ಯಾವುವು. ಸದರ್ ಸಾಹಿಬರ ಪರಿಮಿತಿಗಳು ಯಾವುವು? ಎಂದು ಅವರು ಕೇಳುತ್ತಾರೆ. ಉದಾಹರಣೆಗೆ ಮುರಬ್ಬಿ ಒಂದು ಕೆಲಸವನ್ನು ಜಮಾಅತಿನ ತರಬೇತಿಗೆ ಉತ್ತಮವೆಂದು ಪರಿಗಣಿಸಿ ಅದನ್ನು ಜಮಾಅತಿನಲ್ಲಿ ಜಾರಿಗೊಳಿಸಲು ಪ್ರಯತ್ನಿಸುತ್ತಾರೆ. ಆಗ ಜಮಾಅತಿನ ಸದರ್ ಹೇಳುತ್ತಾರೆ: ಆ ರೀತಿ ಮಾಡುವುದು ಉಚಿತವೆಂದು ನಾನು ಭಾವಿಸುವುದಿಲ್ಲ. ಇಂತಹ ಸಂದರ್ಭದಲ್ಲಿ ಮುರಬ್ಬಿಗಳು ನೆನಪಿಡಬೇಕಾದ ಮೊದಲನೆಯ ವಿಷಯವೇನೆಂದರೆ, ಆಡಳಿತೆ ವ್ಯವಸ್ಥೆಗೋಸ್ಕರ ಯಾರನ್ನು ಅವರ ಮೇಲೆ ನೇಮಿಸಲಾಗಿದೆಯೋ ಅವರನ್ನು ಅನುಸರಿಸಬೇಕು. ಮತ್ತು ತನ್ನ ಅನುಸರಣೆಯ ಮಾದರಿ ತೋರಿಸಬೇಕು. ಯಾವುದಾದರೂ ಅತಿರೇಕದ ಪ್ರಶ್ನೆ ಇದ್ದಲ್ಲಿ ನೇಶನಲ್ ಅಮೀರ್ ಅಥವಾ ಸದರ್‌ಗೆ ತಿಳಿಸಬಹುದು. ಅಥವಾ ಕೇಂದ್ರಕ್ಕೆ ತಿಳಿಸಬಹುದು. ನನಗೂ ಅದರ ಕುರಿತು ಬರೆಯಬಹುದು.

ಅದೇ ರೀತಿ ಸದರ್‌ಗಳಿಗೆ ಮತ್ತು ಅಮೀರರಿಗೆ ನಾನು ಹೇಳಲು ಬಯಸುವುದೇನೆಂದರೆ ಮುರಬ್ಬಿಗಳನ್ನು ಗೌರವಿಸುವಂತೆ ಮಾಡುವುದು ಅವರ ಕೆಲಸವಾಗಿದೆ. ಜಮಾಅತ್‌ಗಳಲ್ಲಿ ಮುರಬ್ಬಿಗಳನ್ನು ಎಲ್ಲರಿಗಿಂತ ಹೆಚ್ಚಾಗಿ ಗೌರವಿಸುವ, ಅವರಿಗೆ ಸಹಾಯ ಮಾಡುವ ಮತ್ತು ಸಮಾಲೋಚನೆ ಮಾಡುವ ವ್ಯಕ್ತಿಗಳು ಸದರ್ ಮತ್ತು ಅಮೀರ್ ಆಗಿರಬೇಕಾಗಿದೆ. ಅದೇ ರೀತಿ ಉಳಿದ ಹುದ್ದೇದಾರರು ಸಹ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಮುರಬ್ಬಿಯೊಂದಿಗೆ ಸಹಕರಿಸುವವರಾಗಬೇಕು. ಮುರಬ್ಬಿಗಳು ಸಹ ಪರಿಪೂರ್ಣ ವಿನಯದೊಂದಿಗೆ ಮತ್ತು ತಖ್ವದೊಂದಿಗೆ ಸದರ್ ಜಮಾಅತ್ ಅಥವಾ ಅಮೀರ್ ಜಮಾಅತ್‌ರೊಂದಿಗೆ ಧಾರಾಳ ಸಹಕರಿಸಬೇಕು. ನಮ್ಮೆಲ್ಲರ ಗುರಿ ಒಂದೇ ಆಗಿದೆ. ಜಮಾಅತಿನ ಜನರಿಗೆ ತರಬೇತಿ ನೀಡುವುದು, ಜಮಾಅತಿನ ನಿಝಾಮ್‌ಗೆ ಗೌರವ ನೀಡುವುದು, ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸುವುದು, ತೌಹೀದನ್ನು ಸ್ಥಾಪಿಸುವುದು ಹಾಗೂ ಇಸ್ಲಾಮಿನ ನೈಜ ತತ್ವಗಳನ್ನು ಲೋಕದಲ್ಲಿ ಪ್ರಚಾರ ಮಾಡುವುದು ಇವುಗಳು ನಮ್ಮ ಉದ್ದೇಶಲಕ್ಷ್ಯಗಳಾಗಿವೆ. ಇವುಗಳಿಗೆ ಸಂಬಂಧಿಸಿ ಪರಿಮಿತಿಗಳಾಗಲೀ ಅಧಿಕಾರ ಕ್ಷೇತ್ರದ

ಪ್ರಶ್ನೆಯಾಗಲಿ ಏನಿದೆ? ಪರಸ್ಪರ ಒಂದಾಗಿ ಕೆಲಸ ಮಾಡಬೇಕು. ಇದರ ಬಗ್ಗೆ ಅಲ್ಲಾಹನ ಮೂಲಭೂತ ನಿರ್ದೇಶ ಹೀಗಿದೆ: **ತಆವನೂ ಅಲಲ್ ಬಿರ್ರಿ ವತ್ತಖ್ವಾ.** ಒಳಿತಿನ ಮತ್ತು ತಖ್ವದ ಕೆಲಸಗಳಲ್ಲಿ ಪರಸ್ಪರ ಒಬ್ಬರಿನ್ನೊಬ್ಬರಿಗೆ ಸಹಾಯ ಮಾಡಿರಿ.

ಜಮಾಅತಿಗೋಸ್ಕರ ಮಾಡುವ ಕೆಲಸ ಅದನ್ನು ಯಾವ ರೀತಿಯಲ್ಲಿ ಮಾಡುವುದಕ್ಕೆ ಭಾಗ್ಯ ಲಭಿಸುವುದಾದರೂ ಅದಕ್ಕಿಂತ ದೊಡ್ಡ ಒಳಿತು ಬೇರೊಂದಿಲ್ಲ. ಆದರೆ ಜಮಾಅತಿಗೆ ಸೇವೆ ಮಾಡಲು ತಖ್ವ ಸಹ ಆವಶ್ಯಕವಾಗಿದೆ. ಜಮಾಅತಿಗೆ ಸೇವೆ ಸಲ್ಲಿಸುವಾಗ ವಾಸ್ತವಿಕ ಮತ್ತು ಅಂಗೀಕಾರಾರ್ಹವಾದ ಭಾಗ್ಯ ಲಭಿಸುವುದು ತಖ್ವದ ಮೂಲಕವೇ ಆಗಿದೆ. ಇದು ಅಲ್ಲಾಹನ ಬಗ್ಗೆ ಭಯವನ್ನು ಹೃದಯದಲ್ಲಿ ಇಟ್ಟುಕೊಂಡು ಅವನ ಸಂಪ್ರೀತಿ ಗಳಿಸಲು ಮಾಡುವ ಕೆಲಸವೇ ಆಗಿದೆ.

ಕೆಲವು ಸಾರಿ ಸದರ್, ಹುದ್ದೇದಾರರು ಮತ್ತು ಮುರಬ್ಬಿ ಇವರ ಪರಸ್ಪರ ಸಂಬಂಧದಲ್ಲಿ ಸ್ವಲ್ಪ ಮಾತ್ರ ಕೊರತೆ ಉಂಟಾದಲ್ಲಿ ಅಥವಾ ಯಾವುದಾದರೂ ಚಿಕ್ಕಪುಟ್ಟ ದೂರು ಪರಸ್ಪರರ ಬಗ್ಗೆ ತಲೆದೋರಿದಲ್ಲಿ ಆಗ ಶೈತಾನ್ ಒಳಗೆ ಪ್ರವೇಶಿಸಲು ಪ್ರಯತ್ನಿಸುತ್ತಿರುವುದಾಗಿ ಕಂಡು ಬಂದಿದೆ. ಆಗ ಒಳಿತು ಮತ್ತು ತಖ್ವಗಳ ಬೇರುಗಳು ಅಲುಗಾಡಲು ಪ್ರಾರಂಭಿಸುತ್ತವೆ. ಕೆಲವರು ಮುರಬ್ಬಿಗೆ ಅನುಕಂಪ ತೋರಿಸುವವರಾಗಿ ಹೇಳುತ್ತಾರೆ– ಜಮಾಅತಿನ ಸದರ್ ನಿಮ್ಮೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸಿಲ್ಲ ಎಂದು. ಇನ್ನು ಕೆಲವರು ಸದರ್ ಸಾಹಿಬರೊಂದಿಗೆ ಹೇಳುತ್ತಾರೆ– ಮುರಬ್ಬಿ ಆ ರೀತಿ ವರ್ತಿಸಬಾರದಿತ್ತು ಎಂದು. ಇವುಗಳ ಪರಿಣಾಮವಾಗಿ ಜನರಲ್ಲಿ ಅಸಮಾಧಾನ ಉಂಟಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೋಡಿರಿ, ಒಬ್ಬನು ಇನ್ನೊಬ್ಬನನ್ನು ತಿನ್ನುವ ಜಮಾಅತ್, ಜಮಾಅತ್ ಆಗಲಾರದು. ನಾಲ್ಕು ಜನರು ಒಟ್ಟಿಗೆ ಕುಳಿತುಕೊಂಡಿರುವಾಗ ಒಬ್ಬನು ತನ್ನ ಬಡವನಾದ ಸಹೋದರನನ್ನು ನಿಂದಿಸುವುದು, ದೂಷಿಸುವುದು ಖಂಡಿತವಾಗಿಯೂ ಸರಿಯಾದುದಲ್ಲ. ಒಗ್ಗಟ್ಟಿನಲ್ಲಿ ಶಕ್ತಿ ಇದೆ. ಒಟ್ಟಿಗೆ ಸೇರಿರಿ, ಒಂದಾಗಿರಿ. ಅದರಿಂದ ಶಕ್ತಿ, ಸಾಮರ್ಥ್ಯಗಳು ಲಭಿಸುವುವು. ಐಕ್ಯತೆಯಿಂದ ಪ್ರೀತಿ ಹುಟ್ಟುತ್ತದೆ ಮತ್ತು ಅನುಗ್ರಹ ಲಭಿಸುತ್ತದೆ. ನೈತಿಕ ಶಕ್ತಿಗಳನ್ನು ವಿಶಾಲಗೊಳಿಸಿರಿ. ಸಹಾನುಭೂತಿ, ಪ್ರೀತಿ, ಕ್ಷಮಾಗುಣ, ಕರುಣೆ ಇತ್ಯಾದಿಗಳನ್ನು ವ್ಯಾಪಿಸುವಂತೆ ಮಾಡುವಾಗ ಮಾತ್ರ ಇದು ಸಾಧ್ಯವಾಗುವುದು. ದಯೆ ಮತ್ತು ತಪ್ಪುಗಳ ಕಡೆಗಣಿಸುವಿಕೆಗೆ ಇತರ ಸ್ವಭಾವ ಗುಣಗಳ ಮೇಲೆ ಆದ್ಯತೆ ನೀಡಿರಿ.

ನಾನು ಹೇಳಿದುದರ ಅರ್ಥ, ಜಮಾಅತ್‌ನಲ್ಲಿ ಹುದ್ದೇದಾರರು, ಸದರ್, ಅಮೀರ್ ಮತ್ತು ಮುರಬ್ಬಿಗಳ ಮಧ್ಯೆ ಸಾಮಾನ್ಯವಾಗಿ ಭಿನ್ನಾಭಿಪ್ರಾಯಗಳು ತಲೆದೋರುತ್ತಾ ಇವೆ ಎಂದಲ್ಲ. ಖಂಡಿತವಾಗಿಯೂ ಅಲ್ಲ. ಈ ವಿಷಯಗಳ ಬಗ್ಗೆ ನಾನು ಸ್ಪಷ್ಟವಾಗಿ ಹೇಳಲು ಕಾರಣವೇನೆಂದರೆ, ಸದರ್, ಅಮೀರ್ ಮತ್ತು ಮುರಬ್ಬಿಗಳು, ಅವರು ಮಾಡಬೇಕಾದ ಕೆಲಸಗಳು ಮತ್ತು ಅವರ ಕಾರ್ಯಕ್ಷೇತ್ರಗಳು ಬಹಳ ವಿಶಾಲವಾಗಿದೆ ಎಂದು ತಿಳಿಸಿಕೊಡಲಿಕ್ಕಾಗಿದೆ. ಒಂದು ಮಹತ್ವಪೂರ್ಣ ಉದ್ದೇಶಲಕ್ಷ್ಯ ನಮ್ಮ ಮುಂದಿದೆ. ಆದರೆ ಯಾವಾಗಲಾದರೂ ಆಕಸ್ಮಿಕವಾಗಿ ಪರಸ್ಪರ ಭಿನ್ನಾಭಿಪ್ರಾಯ ತಲೆದೋರಿದರೆ ತಕ್ಷಣ ಅದನ್ನು ಪರಿಹರಿಸಬೇಕು. ಏಕೆಂದರೆ, ಪರಸ್ಪರವಿರುವ ಭಿನ್ನಾಭಿಪ್ರಾಯ ಅಲ್ಲಿಗೇ ಸೀಮಿತಗೊಳ್ಳುವುದಿಲ್ಲ ಎಂದು ಕಂಡು ಬಂದಿದೆ. ಜಮಾಅತಿನ ಸದಸ್ಯರ ಮೇಲೆ ಸಹ ಅದರ ಪ್ರಭಾವ ಉಂಟಾಗುತ್ತದೆ. ನಾನು ಹೇಳಿದ ಹಾಗೆ ಶೈತಾನನು ಅದರಿಂದ ಅನುಚಿತ ಲಾಭ ಪಡೆಯುತ್ತಾನೆ. ಆದುದರಿಂದ ಜಮಾಅತಿನ ಹುದ್ದೇದಾರರು ಮತ್ತು ಮುರಬ್ಬಿ ಯಾವಾಗಲೂ ತಮ್ಮ ಪ್ರಮುಖ ಉದ್ದೇಶವನ್ನು ತಮ್ಮ ಮುಂದೆ ಇರಿಸಿ ಕಾರ್ಯ ಪ್ರವೃತ್ತರಾಗಬೇಕು. ಜಮಾಅತ್ ಸದಸ್ಯರಿಗೆ ಜ್ಞಾನಕ್ಕೆ, ಆಧ್ಯಾತ್ಮಿಕತೆಗೆ ಮತ್ತು ಜಮಾಅತಿನ ವ್ಯವಸ್ಥೆಗೆ ಸಂಬಂಧಿಸಿ ತರಬೇತಿ ನೀಡಬೇಕಾದ ಹೊಣೆಗಾರಿಕೆ ಈ ಎರಡು ವಿಭಾಗಗಳ ಮೇಲೆ ಹೊರಿಸಲಾಗಿದೆ. ಆ ಹೊಣೆಗಾರಿಕೆಗಳನ್ನು ಎರಡು ವಿಭಾಗದವರೂ ಜೊತೆಸೇರಿ ಈಡೇರಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ: ಪರಸ್ಪರ ಒಗ್ಗಟ್ಟಾಗಿ ಕೆಲಸ ಮಾಡುವಾಗ ಮಾತ್ರ ಸರಿಯಾದ ಪರಿಣಾಮ ಲಭಿಸುವುದು. ಎರಡು ಕೈಗಳು ಸೇರಿ ಮಾಡಬೇಕಾದ ಕೆಲಸವನ್ನು ಒಂದು ಕೈಯಿಂದ ಮಾಡಲು ಸಾಧ್ಯವಾಗಲಾರದು. ಎರಡು ಕಾಲುಗಳನ್ನು ಬಳಸಿ ಸಾಗುವ ದೂರವನ್ನು ಒಂದು ಕಾಲಿನಿಂದ ಚಲಿಸಿ ಸಾಗಲು ಸಾಧ್ಯವಿಲ್ಲ.

ಒಟ್ಟಿನಲ್ಲಿ, ಸದರ್ ಅಥವಾ ಅಮೀರ್ ಎಲ್ಲ ಅಧಿಕಾರವನ್ನು ತನ್ನ ಕೈಯಲ್ಲಿರಿಸಿ ತನ್ನ ಇಚ್ಛೆ ಚಲಾಯಿಸಲು ಪ್ರಯತ್ನಿಸಬಾರದು. ಅದೇ ರೀತಿ ಮುರಬ್ಬಿ ಸಹ ತನ್ನ ಅಭಿಪ್ರಾಯ ಸರಿ ಎಂದು ಭಾವಿಸಿ ಅದರ ಪ್ರಕಾರ ಕೆಲಸ ಮಾಡಲು ಅಥವಾ ಮಾಡಿಸಲು ಪ್ರಯತ್ನಿಸಬಾರದು. ಪರಸ್ಪರ ಸಹಕರಿಸಿ ಕೆಲಸಮಾಡಬೇಕು. ಮುರಬ್ಬಿಯ ಹೊಣೆಗಾರಿಕೆ ಜಮಾಅತ್‌ಗೆ ತರಬೇತಿ ನೀಡುವುದಾಗಿದೆ. ನಾನು ಮೊದಲು ಹೇಳಿದ ಹಾಗೆ ಮುರಬ್ಬಿಯ ಧಾರ್ಮಿಕ ಜ್ಞಾನ ಹೆಚ್ಚಿಗೆ ಇರುತ್ತದೆ. ಅಥವಾ ಹೆಚ್ಚಿಗೆ ಇರಬೇಕಾಗಿದೆ. ಮುರಬ್ಬಿ ತನ್ನ ಧಾರ್ಮಿಕ ಜ್ಞಾನವನ್ನು ವರ್ಧಿಸುತ್ತಾ ಇರಬೇಕು. ಮುರಬ್ಬಿ ತನ್ನ ಆಧ್ಯಾತ್ಮಿಕತೆಯನ್ನು ವರ್ಧಿಸಲು ಪ್ರಯತ್ನಿಸುತ್ತಾ ಇರಬೇಕು. ಆದುದರಿಂದ ಮುರಬ್ಬಿಯ ತಖ್ವದ ಮಟ್ಟ ಸಾಮಾನ್ಯ ಜನರಿಂದ ಹೆಚ್ಚಿಗೆ ಇರಬೇಕು. ಈ ವಿಷಯಗಳನ್ನು ಮುರಬ್ಬಿ ಮನವರಿಕೆ ಮಾಡಿಕೊಂಡು ಅವುಗಳ ಪ್ರಕಾರ ಕಾರ್ಯನಿರತನಾದರೆ ಹುದ್ದೇದಾರರ ಮತ್ತು ಜಮಾಅತಿನ ಸದಸ್ಯರ ಮಧ್ಯೆ ಮುರಬ್ಬಿಗೆ ತಾನಾಗಿಯೇ ಒಂದು ಸ್ಥಾನ ಲಭಿಸುವುದು.

ಸದರ್ ಅಥವಾ ಅಮೀರ್ ಜಮಾಅತ್ ನೆನಪಿಡಬೇಕಾದುದೇನೆಂದರೆ, ಜಮಾಅತಿನ ವ್ಯವಸ್ಥೆಯ ಮುಖ್ಯಾಧಿಕಾರಿಯಾಗಿರುವ ಕಾರಣ ಜಮಾಅತಿನ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ನಡೆಸುವುದು ಅವರ ಹೊಣೆಗಾರಿಕೆಯಾಗಿದೆ. ಈ ಕೆಲಸಕ್ಕೋಸ್ಕರ ಆಯಾಕಾಲದ ಖಲೀಫರು ಅವರನ್ನು ತನ್ನ ಪ್ರತಿನಿಧಿಯಾಗಿ ನೇಮಿಸಿದ್ದಾರೆ. ಇದೇ ರೀತಿ ಜಮಾಅತಿನ ಧಾರ್ಮಿಕ, ಆಧ್ಯಾತ್ಮಿಕ ಅಭಿವೃದ್ಧಿಗೋಸ್ಕರ ಸಾಧ್ಯವಿರುವ ಮಾರ್ಗಗಳನ್ನು ಬಳಸುವ ಹೊಣೆಗಾರಿಕೆ ಮುರಬ್ಬಿಯದಾಗಿದೆ. ಈ ವಿಷಯಗಳಿಗೆ

ಸಂಬಂಧಿಸಿ ಮುರಬ್ಬಿ ಆಯಾಕಾಲದ ಖಲೀಫರ ಪ್ರತಿನಿಧಿಯಾಗಿದ್ದಾರೆ. ಆದುದರಿಂದ ಸದರ್‌ಗಳು, ಅಮೀರರು, ಮುರಬ್ಬಿಗಳು ಪರಸ್ಪರ ಸಹಕಾರ ನೀಡಿ ಕಾರ್ಯ ನಿರ್ವಹಿಸಬೇಕು. ಅವರು ಒಂದು ಕಾರ್ಯ ಪದ್ಧತಿ ಪ್ರಕಾರ ಕೆಲಸ ಮಾಡಬೇಕು. ಹೀಗೆ ಮಾಡಿದರೆ ಜಮಾಅತಿನ ವ್ಯವಸ್ಥೆ ಬಲಿಷ್ಠವಾಗುವುದು. ಜಮಾಅತಿನ ಆಧ್ಯಾತ್ಮಿಕ ಮತ್ತು ಜ್ಞಾನದ ಮಟ್ಟ ಅಭಿವೃದ್ಧಿಗೊಳ್ಳುತ್ತಾ ಇರುವುದು.

ನಾನು ಇದರ ಮೊದಲು ಸಂಕ್ಷಿಪ್ತವಾಗಿ ಹೇಳಿದ್ದೇನೆ. ಪುನಃ ಹೇಳುತ್ತೇನೆ. ಸದರ್, ಅಮೀರ್ ಮತ್ತು ಇತರ ಎಲ್ಲ ಹುದ್ದೇದಾರರು, ಮುಬಲ್ಲಿಗ್ ಮತ್ತು ಎಲ್ಲ ವಾಕಿಫೀನೆ ಝಿಂದಗಿಗಳ ಬಗ್ಗೆ ತಮ್ಮ ಹೃದಯದಲ್ಲಿ ಗೌರವವನ್ನು ಹೊಂದಬೇಕಾದುದು ಅವರ ಕೆಲಸ ಮಾತ್ರವಲ್ಲ ಅವರ ಹೊಣೆಗಾರಿಕೆಯೂ ಆಗಿದೆ. ಜಮಾಅತಿನ ಸದಸ್ಯರ ಹೃದಯಗಳಲ್ಲೂ ಈ ಗೌರವ ಹುಟ್ಟುವಂತೆ ಮಾಡಬೇಕು. ಅವರಿಗೆ ಗೌರವ ನೀಡುವುದು ಮತ್ತು ಇತರರು ಗೌರವಿಸುವಂತೆ ಮಾಡುವುದು ನಿಮ್ಮ ಕೆಲಸವಾಗಿದೆ. ಮುರಬ್ಬಿ, ಮುಬಲ್ಲಿಗ್ ಮತ್ತು ವಾಕಿಫೆ ಝಿಂದಗಿಯ ಸ್ಥಾನದ ಮಹತ್ವ ಜನರಿಗೆ ಸ್ಪಷ್ಟವಾಗಬೇಕು. ಹಾಗೆ ಮಾಡುವುದರಿಂದ ಹೆಚ್ಚು ಹೆಚ್ಚಾಗಿ ಯುವಕರು ಜಮಾಅತಿನ ಸೇವೆಗೆ ತಮ್ಮನ್ನು ಅರ್ಪಿಸಲು ಸಿದ್ಧರಾಗುವರು. ಯುವಕರಾದ ವಾಕಿಫೆ ಝಿಂದಗಿ ಜನರು ಪೂರ್ಣವಾಗಿ ತಮ್ಮನ್ನು ಜಮಾಅತಿನ ಸೇವೆಗೆ ಅರ್ಪಿಸಲು ಬಾಹ್ಯ ಪ್ರೇರೇಪಣೆ ಸಹ ಆವಶ್ಯಕವಾಗಿದೆ. ಅದು ಅವರ ಅಭಿರುಚಿಯನ್ನು ಉತ್ತೇಜಿಸುವುದು.

ವಾಕಿಫೀನೆ ನೌ ಯುವಕರೊಂದಿಗೆ ಮತ್ತು ಕೆಲಸ ಮಾಡಲು ತೊಡಗಿದ ಯುವಕರಾದ ಮುರಬ್ಬಿಗಳೊಂದಿಗೆ ನಾನು ಹೇಳಲು ಇಚ್ಛಿಸುವುದೇನೆಂದರೆ, ಲೋಕದ ಜನರು ನಿಮ್ಮ ಸ್ಥಾನವೇನೆಂದು ಅರ್ಥ ಮಾಡಿಕೊಂಡರೂ, ಅರ್ಥ ಮಾಡಿಕೊಳ್ಳದಿದ್ದರೂ, ಯಾವುದಾದರೂ ಸದರ್, ಅಮೀರ್, ಹುದ್ದೇದಾರ ಅಥವಾ ಜಮಾಅತಿನ ಯಾವನೇ ವ್ಯಕ್ತಿ ನಿಮಗೆ ಗೌರವ ನೀಡಿದರೂ ನೀಡದಿದ್ದರೂ ನೀವು ಬಲಿದಾನ ಅರ್ಪಿಸುವ ಪ್ರತಿಜ್ಞೆ ಅಲ್ಲಾಹನೊಂದಿಗೆ ಮಾಡಿರುವಿರಿ. ಅದನ್ನು ಉತ್ತಮ ಸಂಕಲ್ಪದೊಂದಿಗೆ ಈಡೇರಿಸುತ್ತಾ ಇರಬೇಕು. ನೀವು ಮುರಬ್ಬಿಯಾಗಿರುವಾಗ ಎಲ್ಲ ವಿಷಯಗಳ ಬಗ್ಗೆ ಅಲ್ಲಾಹನ ಮುಂದೆಯೇ ಬಾಗಬೇಕು. ಜನರ ವರ್ತನೆಯನ್ನು ನಿರ್ಲಕ್ಷಿಸಬೇಕು. ನಿಮಗೆ ಯಾವುದಾದರೂ ದೂರು ಇದ್ದರೆ ಸಹ ಅದನ್ನು ಜನರೊಂದಿಗೆ ಹೇಳದೆ ಅಲ್ಲಾಹನಿಗೆ ಬಾಗಿ ನಿವೇದಿಸಬೇಕು. ಒಬ್ಬ ಹುದ್ದೇದಾರ ಜಮಾಅತಿಗೆ ಪ್ರಯೋಜನಕರವಾದ ವ್ಯಕ್ತಿಯಾಗಿಲ್ಲವಾದರೆ ನೀವು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ ಅಂತಹ ಹುದ್ದೇದಾರನಿಂದ ರಕ್ಷಣೆ ನೀಡಲಿ ಎಂದು. ನಾನು ಹುದ್ದೇದಾರರೊಂದಿಗೆ ಮತ್ತು ಮುರಬ್ಬಿಗಳೊಂದಿಗೆ ಎಂದರೆ ಎರಡು ವಿಭಾಗದ ಜನರೊಂದಿಗೆ ಹೇಳಲು ಬಯಸುತ್ತೇನೆ. ಜಮಾಅತಿನ ಸದಸ್ಯರ ಮನೆಗಳಲ್ಲಿ ಹುದ್ದೇದಾರ ಮತ್ತು ಮುರಬ್ಬಿಗಳ ಬಗ್ಗೆ ನಕಾರಾತ್ಮಕ ಮಾತುಕತೆಗಳು ನಡೆಯಬಾರದೆಂದು ನಾವು ಪ್ರತೀಕ್ಷಿಸುತ್ತೇವೆ. ಅದೇರೀತಿ ಸದರ್‌ಗಳು, ಅಮೀರರು, ಹುದ್ದೇದಾರರು, ಮತ್ತು ಮುರಬ್ಬಿಗಳು ಯಾವಾಗಲೂ ನೆನಪಿಡಬೇಕಾದುದೇನೆಂದರೆ ಅವರ ಮನೆಗಳಲ್ಲೂ ಒಬ್ಬರಿನ್ನೊಬ್ಬರ ಬಗ್ಗೆ ನಕಾರಾತ್ಮಕ ಮಾತುಕತೆಗಳು ನಡೆಯಬಾರದು ಎಂಬುದರ ಬಗ್ಗೆ ಬದ್ಧರಾಗಬೇಕು. ಆದರೆ ಸಕಾರಾತ್ಮಕ ಮಾತುಕತೆ ನಿಸ್ಸಂಶಯವಾಗಿ ನಡೆಸಬಹುದು. ಹೀಗೆ ಮಾಡುವುದರ ಮೂಲಕ ಮುರಬ್ಬಿಗಳ ಸಂತಾನದಲ್ಲೂ ಹುದ್ದೇದಾರರ ಸಂತಾನದಲ್ಲೂ ಜಮಾಅತಿನ ನಿಝಾಮ್ ಬಗ್ಗೆ, ವಾಕಿಫೀನೆ ಝಿಂದಗಿ ಬಗ್ಗೆ, ಮತ್ತು ಯಾವುದಾದರೂ ರೀತಿಯಲ್ಲಿ ಜಮಾಅತಿಗೆ ಸೇವೆ ಸಲ್ಲಿಸುವವರ ಬಗ್ಗೆ ಗೌರವ ಭಾವನೆ ಹುಟ್ಟುವುದು. ಹುದ್ದೇದಾರರು ಮತ್ತು ವಿಶಿಷ್ಟವಾಗಿ ಸದರ್ ಮತ್ತು ಅಮೀರ್ ನೆನಪಿಡಬೇಕಾದುದೇನೆಂದರೆ ಅವರು ಯಾವಾಗಲೂ ಜಮಾಅತಿನ ಸದಸ್ಯರಿಗೋಸ್ಕರ ಪ್ರೀತಿಯ ಬಾಹುಗಳನ್ನು ಹರಡಬೇಕು. ತನ್ನ ಜಮಾಅತಿನ ಪ್ರತಿಯೊಬ್ಬ ಸದಸ್ಯ ತಾನು ಸುರಕ್ಷಿತ ಬಾಹುಗಳ ಕೆಳಗಿದ್ದೇನೆಂಬ ಭಾವನೆ ಹೊಂದುವಂತೆ ಮಾಡಬೇಕು. ಪ್ರತಿಯೊಬ್ಬರೊಂದಿಗೆ ಮುಗುಳು ನಗುತ್ತಾ ಮೃದುವಾಗಿ ಮಾತನಾಡಿರಿ. ಹುದ್ದೆಯ ಕುರ್ಚಿ ನಿಮ್ಮಲ್ಲಿ ಅಹಂಭಾವವನ್ನು ಸೃಷ್ಟಿಸುವ ಬದಲಾಗಿ ವಿನಯವನ್ನು ಸೃಷ್ಟಿಸುವಂತಾಗಲಿ. ಪ್ರತಿಯೊಬ್ಬ ಹುದ್ದೇದಾರನ ಮತ್ತು ಪ್ರತಿಯೊಬ್ಬ ಮುರಬ್ಬಿಯ ಬಾಗಿಲು ಪ್ರತಿಯೊಬ್ಬ ವ್ಯಕ್ತಿಗೆ ತೆರೆದಿರಲಿ. ವ್ಯವಹಾರಗಳನ್ನು ಪರಿಹರಿಸಲು ಶೀಘ್ರವಾಗಿ ಪ್ರಯತ್ನಿಸಿರಿ. ಅವುಗಳನ್ನು ಜೋತಾಡುವಂತೆ ಮಾಡಬೇಡಿರಿ.

ಹುದ್ದೇದಾರರು ಯಾವಾಗಲೂ ನೆನಪಿಡಬೇಕಾದು ದೇನೆಂದರೆ ಜಮಾಅತಿನ ಯಾವುದೇ ಹುದ್ದೆ ಹೆಮ್ಮೆಯನ್ನು ವರ್ಧಿಸಲಿಕ್ಕೋಸ್ಕರವಲ್ಲ. ಅದು ವಿನಯವನ್ನು ವರ್ಧಿಸಲಿಕ್ಕಾಗಿದೆ. ಆದುದರಿಂದ ನೀವು ನೀಡುವ ಪ್ರತಿಯೊಂದು ತೀರ್ಪು ಮತ್ತು ಮಾಡುವ ಪ್ರತಿಯೊಂದು ಕೆಲಸ ಅಲ್ಲಾಹನ ಭಯವನ್ನು ಹೃದಯದಲ್ಲಿ ಇರಿಸಿ ಅತ್ಯಂತ ವಿನೀತನಾಗಿ ನ್ಯಾಯಪಾಲನೆಯ ಆವಶ್ಯಕತೆಯನ್ನು ಈಡೇರಿಸುತ್ತಾ ಮಾಡಲು ಪ್ರಯತ್ನಿಸಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಧಿಕಾರಿಗಳಿಗೆ ಮತ್ತು ನ್ಯಾಯಾಧೀಶರಿಗೆ ನೀಡಿದ ಮುನ್ನೆಚ್ಚರಿಕೆಯನ್ನು ಪ್ರತಿಯೊಬ್ಬ ಹುದ್ದೇದಾರ ತನ್ನ ಮುಂದೆ ಇರಿಸುವುದಾದರೆ ತನ್ನ ಕೆಲಸದ ಮಟ್ಟವನ್ನು ಮತ್ತು ನ್ಯಾಯಪಾಲನೆಯ ಮಟ್ಟವನ್ನು ಹಲವು ಪಟ್ಟು ವರ್ಧಿಸಲು ಸಾಧ್ಯವಾಗುವುದು. ಒಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಯಾರಿಗೆ ಜನರ ಮೇಲ್ವಿಚಾರಣೆ ಮಾಡಲು ಮತ್ತು ಹೊಣೆಗಾರಿಕೆ ನಿರ್ವಹಿಸಲು ನೇಮಿಸಲಾಗಿದೆಯೋ ಅವನು ಜನರ ಮೇಲ್ವಿಚಾರಣೆ ಮಾಡುವ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸುವುದರಲ್ಲಿ ಕೊರತೆ ಉಂಟುಮಾಡುವುದಾದರೆ ಮತ್ತು ಅವರಿಗೆ ಹಿತಕರವಾಗಿ ಕಾರ್ಯನಿರ್ವಹಿಸುವುದರಲ್ಲಿ ಕೊರತೆಯುಂಟುಮಾಡುವುದಾದರೆ ಅವನು ಮೃತನಾದ ನಂತರ ಅವನಿಗೆ ಸ್ವರ್ಗವು ನಿಷಿದ್ಧಗೊಳಿಸಲ್ಪಡುವುದು. ನೋಡಿರಿ ಎಷ್ಟು ಕಠಿಣವಾಗಿ ಎಚ್ಚರಿಕೆ ನೀಡಲಾಗಿದೆ. ಇದು ಮನುಷ್ಯನನ್ನು ಕಂಪಿಸುವಂತೆ ಮಾಡುವುದಾಗಿದೆ. ಅಲ್ಲಾಹನ ಬಗ್ಗೆ ಮತ್ತು ಪರಲೋಕದ ಬಗ್ಗೆ ದೃಢನಂಬಿಕೆ ಇದ್ದರೆ ಪ್ರತಿಯೊಬ್ಬ ಹುದ್ದೇದಾರ ತನ್ನ ಕೆಲಸವನ್ನು ಅತ್ಯಂತ ಭಯಭೀತನಾಗಿ ನಿರ್ವಹಿಸಬೇಕಾಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಸಹ ಹೇಳಿದ್ದಾರೆ: ಖಿಯಾಮತ್ ದಿನದಂದು ಜನರ ಪೈಕಿ ಅಲ್ಲಾಹನಿಗೆ ಹೆಚ್ಚು ಪ್ರಿಯನಾದವನು ಮತ್ತು ಅವನಿಗೆ ಹೆಚ್ಚು ಸಮೀಪವಾಗಿರುವವನು, ನ್ಯಾಯನಿಷ್ಠನಾದ ನ್ಯಾಯಾಧೀಶನಾಗಿರುವನು. ಅಲ್ಲಾಹನಿಗೆ ಅತ್ಯಂತ ಅಪ್ರಿಯನಾದವನು ಮತ್ತು ಅಲ್ಲಾಹನಿಂದ ಅತ್ಯಂತ ಹೆಚ್ಚು ದೂರವಿರುವವನು ದೌರ್ಜನ್ಯಗಾರನಾದ ನ್ಯಾಧೀಶನಾಗಿರುವನು. ಆದುದರಿಂದ ಹುದ್ದೇದಾರರು ತಮ್ಮ ಹೊಣೆಗಾರಿಕೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಈಡೇರಿಸಲು ಪ್ರಯತ್ನಿಸಬೇಕು. ಹಾಗೆ ಮಾಡುವುದಾದರೆ ಮಾತ್ರ ನ್ಯಾಯಪಾಲನೆಯ ಆವಶ್ಯಕತೆಗಳು ಈಡೇರುವುದು. ಇದೇ ರೀತಿ ಜಮಾಅತಿನ ಅಧೀನ ಸಂಘಟನೆಗಳ ಹುದ್ದೇದಾರರು ಸಹ ತಮ್ಮ ಹೊಣೆಗಾರಿಕೆಗಳನ್ನು ಅರಿತುಕೊಳ್ಳಬೇಕು. ಅಧೀನ ಸಂಘಟನೆಗಳು ಎಲ್ಲ ಹಂತದಲ್ಲೂ ಸಕ್ರಿಯವಾಗಬೇಕು. ಅನ್‌ಸಾರ್, ಲಜ್ನ ಮತ್ತು ಖುದ್ದಾಮ್ ಸಹ ಸಕ್ರಿಯರಾಗಬೇಕು. ಪರಸ್ಪರ ಸಹಕರಿಸಿ ಕಾರ್ಯ ಪ್ರವೃತ್ತರಾಗುವುದಾದರೆ ಅಧೀನ ಸಂಘಟನೆಗಳು ಮತ್ತು ಜಮಾಅತಿನ ನಿಝಾಮ್ ಸಕ್ರಿಯರಾಗಿ ವರ್ತಿಸುವುದಾದರೆ ಜಮಾಅತಿನ ಅಭಿವೃದ್ಧಿ ಹಲವು ಪಟ್ಟು ವರ್ಧಿಸಬಹುದಾಗಿದೆ.

ಪ್ರತಿಯೊಬ್ಬ ಹುದ್ದೇದಾರ ಒಂದು ವಿಷಯ ನೆನಪಿಡಬೇಕು; ಯಾರಾದರೂ ಒಬ್ಬ ವ್ಯಕ್ತಿ ತನ್ನ ವಿರುದ್ಧ ದೂರುವುದಾದರೆ ಸಹ, ಅಥವಾ ತನ್ನ ವಿರುದ್ಧ ಮಾತನಾಡಿದರೆ, ಅದನ್ನು ಆಲಿಸುವ ಧೈರ್ಯವಿರಬೇಕು. ಹುದ್ದೇದಾರರಲ್ಲಿ ಎಲ್ಲರಕ್ಕಿಂತ ಹೆಚ್ಚಾಗಿ ಸಹನೆ ಇರಬೇಕು. ತನ್ನ ವಿರುದ್ಧ ಮಾತನಾಡುವವನಿಗೆ ಪ್ರತೀಕಾರ ಮಾಡುವುದಕ್ಕೆ ಬದಲಾಗಿ ಎಲ್ಲದಕ್ಕಿಂತಲೂ ಮೊದಲು ತನ್ನನ್ನು ಸುಧಾರಣೆ ಮಾಡಲು ಪ್ರಯತ್ನಿಸಬೇಕು. ತನ್ನಲ್ಲಿ ಈ ಕೆಡುಕು ಇದೆಯೇ ಎಂದು ಪರಿಶೋಧಿಸಬೇಕು. ನ್ಯಾಯಪಾಲನೆಯ ಆವಶ್ಯಕತೆ ಈಡೇರಿಸಲು ಇದು ಸಹ ಆವಶ್ಯಕವಾಗಿದೆ.

ನಾನು ಜಮಾಅತಿನ ಸದಸ್ಯರೊಂದಿಗೆ ಹೇಳಲು ಬಯಸುತ್ತೇನೆ; ಅವರು ತಮ್ಮ ತಖ್ವದ ಮಟ್ಟವನ್ನು ವರ್ಧಿಸಬೇಕು. ಒಳಿತು ಮತ್ತು ತಖ್ವದಲ್ಲಿ ಪರಸ್ಪರ ಸಹಕರಿಸುವ ಬಗ್ಗೆ ಅವರಿಗೂ ಆಜ್ಞೆ ನೀಡಲಾಗಿದೆ. ಜಮಾಅತಿನ ಸದಸ್ಯರ ಒಳಿತು ಮತ್ತು ತಖ್ವದ ಮಟ್ಟ ಹೆಚ್ಚಿಗೆ ಇದ್ದರೆ ಹುದ್ದೇದಾರರು ತಾನಾಗಿಯೇ ಒಳಿತು ಮತ್ತು ತಖ್ವದಲ್ಲಿ ಚಲಿಸುವವರಾಗುತ್ತಾ ಮುಂದುವರಿಯುವರು. ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ನಿಝಾಮನ್ನು ಅನುಸರಣೆ ಮಾಡುವ ಬಗ್ಗೆ ತನ್ನ ಹೊಣೆಗಾರಿಕೆಗಳನ್ನು ನಿಭಾಯಿಸಬೇಕು. ನೀವು ಅನುಸರಣೆ ಮಾಡಬೇಕೆಂಬ ಪ್ರಾಮುಖ್ಯವಾದ ಈ ಆಜ್ಞೆಯನ್ನು ಪ್ರತಿಯೊಬ್ಬ ಸದಸ್ಯನಿಗೆ ನೀಡಲಾಗಿದೆ. ನಿಮ್ಮ ಸಂತಾನಗಳ ಹೃದಯದಲ್ಲಿ ಈ ವಿಷಯವನ್ನು ಸ್ಥಾಪಿಸಿರಿ– ನಾವು ನಮ್ಮ ಕಡ್ಡಾಯ ಕರ್ತವ್ಯಗಳನ್ನು ಈಡೇರಿಸಬೇಕೆಂದು. ಬಡತನದಲ್ಲೂ, ಐಶ್ವರ್ಯಕಾಲದಲ್ಲೂ, ಸಂತೋಷದ ಕಾಲದಲ್ಲೂ, ದುಃಖದ ಕಾಲದಲ್ಲೂ, ಹಕ್ಕುಗಳನ್ನು ಕಳೆದುಕೊಂಡ ಕಾಲದಲ್ಲೂ, ಆದ್ಯತೆ ನೀಡಲ್ಪಟ್ಟ ಕಾಲದಲ್ಲೂ ಒಟ್ಟಾರೆ ಪ್ರತಿಯೊಂದು ಸ್ಥಿತಿಯಲ್ಲಿ ಅನುಸರಣೆ ಮಾಡಬೇಕಾದುದು ಅನಿವಾರ್ಯವಾಗಿದೆ. ನಮ್ಮ ಪ್ರತಿಯೊಂದು ಕೆಲಸ ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರ ನಿರ್ವಹಿಸುವಂತೆ ಅಲ್ಲಾಹನು ನಮ್ಮನ್ನು ಅನುಗ್ರಹಿಸಲಿ. ಈ ಕಾಲದಲ್ಲಿ ಅಲ್ಲಾಹನು ಕಳುಹಿಸಿದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಪ್ರೇಮಿಯ ಜಮಾಅತಿನಲ್ಲಿ ಸೇರಿದ ನಾವು ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವಂತೆ ಅಲ್ಲಾಹನು ಮಾಡಲಿ–ಆಮೀನ್.

*****


***Friday Sermon delivered by Hadrath Khaleefatul Masih Al Khamis(atba)***

*At, Masjid Baithul Futhuh, London on 10-03-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon